ಸಾಕ್ಷಿಯನ್ನು ದಿಃ 04-02-2026 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ ಶ್ರೀ ಬಿ ವಿ ಹೆಚ್ ವಕೀಲರಿಂದ ( ವಾದಿ ಪರವಾಗಿ)**

ರಾಜೇಸಾಬ ನನ್ನ ದೊಡ್ಡಪ್ಪ. ಜಮಾಲಬಿ ರೋಶನಬಿ ನನ್ನ ತಾಯಿ. ಹಸೀನಾಬಾನು ನನ್ನ 2 ನೇ ತಾಯಿ. ಮಹ್ಮಮದರಫೀಕ ತಂದೆ ಬಾಬುಸಾಬ ಬೆಲೇರಿ ನನ್ನ ಸಹೋದರ. ಲಾಲಬಿ, ಫಾತೀಮಾ, ಫಕ್ರುಮಾ, ರೇಷ್ಮಾ, ಹುಸೇನಬಿ ತಂದೆ ಬಾಬುಸಾಬ ಬೆಲೇರಿ ನನ್ನ ಸಹೋದರರಿಯರು. ಹೈದರಸಾಬ ತಂದೆ ದಾವಾಲಸಾಬ ಬೆಲೇರಿ ನನ್ನ ಚಿಕ್ಕಪ್ಪ. ದಾವಲಬಿ ಕೋಂ ಫಕ್ರುಸಾಬ ಬೆಲೇರಿ ನನ್ನ ಚಿಕ್ಕಮ್ಮ. ಸೈರಾಬಾನು, ಹುಸೇನಬಿ, ರಿಯಾನಾಬಾನು, ಆಸೀಫ್ ತಂದೆ ಫಕ್ರುಸಾಬ ಬೆಲೇರಿ ನನ್ನ ಚಿಕ್ಕಪ್ಪನ ಮಕ್ಕಳು. ದಾವಾಲಸಾಬ ನನ್ನ ಅಜ್ಜ ಎಂದರೆ ಸರಿ. ನನಗೆ ವಾದಿಯರ ಪರಿಚಯ ಇಲ್ಲ. ವಾದಿಯರ ಮನೆ ಮತ್ತು ನಮ್ಮ ಮನೆ ಒಂದೇ ಓಣಿಯಲ್ಲಿವೆ ಎಂದರೆ ಸರಿಯಲ್ಲ. ನನಗೆ ವಾದಿಯರ ಪರಿಚಯ ಇದ್ದರೂ ಸಹ ಅವರ ಪರಿಚಯ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರ ಮನೆತನಕ್ಕೆ ಸೇರಿದ 18 ಎಕರೆ 28 ಗುಂಟೆ ಜಮೀನನ್ನು ನನ್ನ ತಾತ ದಾವಲಸಾಬ ಕೋರನಾತೆಯಿಂದ ಸಾಗುವಳಿ ಮಾಡುತ್ತಿದ್ದ ಎಂದರೆ ಸರಿಯಲ್ಲ. ವಾದಿಯರ ಮನೆತನಕ್ಕೆ ಸಬಂಧಿಸಿದ ಜಮೀನನ್ನು ನಿಮ್ಮ ತಾತ ದಾವಲಸಾಬ ಸಾಗುವಳಿ ಮಾಡಿದ್ದಾನೋ ಇಲ್ಲವೋ ಎಂಬ ಪ್ರಶ್ನೆಗೆ 1928 ರಲ್ಲಿ ನಮ್ಮ ಮುತ್ತಜ್ಜ ಹುಸೇನ ನಾಯಕ ಖರೀದಿಸಿದ ಜಮೀನನ್ನು ನಮ್ಮ ಪೂರ್ವಜರ ಕಾಲದಿಂದ ಸಾಗುವಳಿ ಮಾಡುತ್ತಾ ಬಂದಿದ್ದೇವೆ ಎಂದು ಹೇಳುತ್ತಾರೆ. 1928 ಕ್ಕಿಂತ ಮೊದಲು ನಮ್ಮ ಅಜ್ಜ ವಾದಿಯರ ಮನೆತನಕ್ಕೆ ಸೇರಿದ ಜಮೀನು ಉಳುಮೆ ಮಾಡುತ್ತಿದ್ದ ಎಂದರೆ ಗೊತ್ತಿಲ್ಲ. ಸದರಿ ವಿಷಯ ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1928 ರಲ್ಲಿ ಆಸ್ತಿ ಖರೀದಿಸಿದ ವಿಷಯ ನಿಮಗೆ ಹೇಗೆ ಗೊತ್ತಾಯಿತು ಎಂಬ ಪ್ರಶ್ನೆಗೆ ದಾಖಲೆಗಳನ್ನು ನೋಡಿದ್ದೇನೆ ಮತ್ತು ನಮ್ಮ ತಂದೆ ಹಾಗೂ ನಮ್ಮ ತಾತ ಮಾತನಾಡುವುದನ್ನು ಕೇಳಿದ್ದೇವೆ ಎಂದು ಹೇಳುತ್ತಾರೆ. ನಮ್ಮ ತಂದೆ ಹಾಗೂ

ತಾತ ವಾದಿಯರ ಮನೆತನಕ್ಕೆ ಸೇರಿದ ಜಮೀನನ್ನು ಕೋರ ನಾತೆಯಿಂದ ಮಾಡುತ್ತಾ ಬಂದಿದ್ದೇವೆ ಎಂದು ನಮಗೆ ಹೇಳಿದ್ದರೂ ಸಹ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರ ಮನೆತನಕ್ಕೆ ಕಾರ್ಯಕ್ರಮಗಳಲ್ಲಿ ಬೇಕಾದಾಗ ನಮ್ಮ ತಾತ ದಾವಲಸಾಬ ಎತ್ತಿನಬಂಡಿ ತೆಗೆದುಕೊಂಡು ಹೋಗಿ ಅವರ ಕೆಲಸ ಮಾಡಿ ಕೊಡುತ್ತಿದ್ದರು ಎಂದರೆ ಸರಿಯಲ್ಲ. ಆ ಬಗ್ಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರ ಮನೆತನದ ಹೆಣ್ಣು ಮಗಳಾದ ವನಾಜಾಕ್ಷಿಯನ್ನು ಮುಂಡರಗಿ ತಾಲೂಕು ಕಲಕೇರಿ ಗ್ರಾಮದ ವರನಿಗೆ ಮದುವೆ ಮಾಡಿಕೊಟ್ಟಿದ್ದು ಮದುವೆ ಹಾಗೂ ಇತರ ಕಾರ್ಯಕ್ರಮಕ್ಕೆ ನಮ್ಮ ತಾತ ದಾವಲಸಾಬ ಎತ್ತಿನಬಂಡಿ ಕಟ್ಟಿಕೊಂಡು ವಾದಿಯರ ಮನೆಯವರನ್ನು ಕರೆದುಕೊಂಡು ಹೋರಿದ್ದರು ಎಂದರೆ ಸರಿಯಲ್ಲ. ಸದರಿ ವಿಷಯ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1928 ರಲ್ಲಿ ಸರ್ವೇ ನಂಬರ 105/1 ಕ್ಷೇತ್ರ 4 ಎಕರೆ 3 ಗುಂಟೆ ಹಾಗೂ ಸರ್ವೇ ನಂ.105/4 ಕ್ಷೇತ್ರ 9 ಎಕರೆ 26 ಗುಂಟೆ ಖರೀದಿಯಾಗಿದೆ. ಆ ಸಮಯದಲ್ಲಿ ಎರಡು ಖರೀದಿ ಪತ್ರ ಆಗಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿಃ22 ರಲ್ಲಿ 1 ಎಕರೆ 29 ಗುಂಟೆ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. 1928 ರಲ್ಲಿ 9 ಎಕರೆ 26 ಗುಂಟೆ ಖರೀದಿ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿಃ18 ರ ಪ್ರಕಾರ 1937 ರಲ್ಲಿ 9 ಎಕರೆ 17 ಗುಂಟೆ ಖರೀದಿಸಲಾಗಿದೆ ಎಂದರೆ ಇರಬಹುದು. ಸಾಕ್ಷಿ ಮುಂದುವರೆದು ನಂತರ ಕ್ಷೇತ್ರಗಳು ಹೆಚ್ಚು ಕಡಿಮೆಯಾಗಿವೆ ಎಂದು ಹೇಳುತ್ತಾರೆ. ನಮ್ಮ ಪ್ರತಿವಾದ ಪತ್ರದಲ್ಲಿ ಹೇಳಲಾದ ಖರೀದಿ ಪತ್ರಗಳ ದಿನಾಂಕಗಳು, ಜಮೀನಿನ ಕ್ಷೇತ್ರಗಳು, ನಿಡಿಃ18 ಮತ್ತು 22 ರಲ್ಲಿರುವ ಕ್ಷೇತ್ರಗಳು ಒಂದಕ್ಕೊಂದು ಹೊಂದಾಣಿಕೆ ಇಲ್ಲ ಎಂದರೆ ಸರಿಯಲ್ಲ. ನಾವು ಖೊಟ್ಟಿ ಕಾಗದ ಪತ್ರಗಳನ್ನು ಹಾಜರಪಡಿಸಿದ್ದೇವೆ ಎಂದರೆ ಸರಿಯಲ್ಲ. ನಿಡಿಃ 23 ರ ಪ್ರಕಾರ ದಿಃ 003.08.1928 ರಂದು ನಮ್ಮ ಪೂರ್ವಜರು

ಸರ್ವೇ ನಂಬರ 105/2 ಕ್ಷೇತ್ರ 1 ಎಕರೆ 34 ಗುಂಟೆ ಜಮೀನು ಖರೀದಿಸಿದ ಬಗ್ಗೆ ದಾಖಲೆ ಹಾಜರಪಡಿಸಿದ್ದೇನೆ ಎಂದರೆ ಸರಿ.

**(ಈ ಹಂತದಲ್ಲಿ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಿದೆ)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

C/C. ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.